# ಮುಂಗುಸಿ ಮತ್ತು ನಾಗರ ಹಾವು

ಅನೇಕ ವರ್ಷಗಳ ಕಾಲ ನಾಗರಹಾವು– ಮುಂಗುಸಿ ಕಾಡಿನಲ್ಲಿ ಸ್ನೇಹದಿಂದಲೇ ಜೀವಿಸುತ್ತಿದ್ದವು. ಬಿಲದಲ್ಲಿ ಮುಂಗುಸಿ, ಹುತ್ತದಲ್ಲಿ ಹಾವು ನೆಮ್ಮದಿಯಿಂದಿದ್ದವು. ಮುಂಗುಸಿ ಕಾಡೆಲ್ಲ ಅಲೆದಾಡಿ ಮೊಟ್ಟೆಗಳನ್ನು ತಂದು ಬಿಲದಲ್ಲಿ ಸಂಗ್ರಹಿಸಿಟ್ಟು ಹಸಿವಾದಾಗ ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿತ್ತು. ಇದನ್ನು ಕಂಡ ನಾಗರಹಾವು ಒಮ್ಮೆ, ಮುಂಗುಸಿ ಹೊರಗಡೆ ಹೋದಾಗ ಬಿಲ ಹೊಕ್ಕು ಮೊಟ್ಟೆಗಳನ್ನು ಕಬಳಿಸತೊಡಗಿತು. ಆಯಾಸವಿಲ್ಲದೇ ಸುಲಭವಾಗಿ ರುಚಿಯಾದ ಮೊಟ್ಟೆಗಳನ್ನು ಕದ್ದು ತಿನ್ನುವುದು ಹಾವಿಗೆ ಹವ್ಯಾಸವಾಗಿ ಹೋಯಿತು.

ಪಾಪ, ಮುಂಗುಸಿಗೆ ತನ್ನ ಆಹಾರವನ್ನು ಯಾರು ಕದಿಯುತ್ತಿದ್ದಾರೆಂದು ತಿಳಿಯದೇ ಹಾವಿಗೆ ಕೇಳಿದಾಗ, ನಾಗರಹಾವು 'ನಾನಂತೂ ಅಲ್ಲ. ನಂಗೇನು ತಿಳಿಯದು!' ಎಂದು ಸುಳ್ಳು ಹೇಳಿ ತಪ್ಪಿಸಿಕೊಂಡಿತು. ಆದರೂ ಮುಂಗುಸಿಗೆ ಈ ಹಾವಿನ ಮೇಲೆ ಗುಮಾನಿಯಾಯಿತು.

ಒಮ್ಮೆ ಮುಂಗುಸಿ ಹೊರಗಡೆ ಹೋದಂತೆ ನಟಿಸಿ, ಅಲ್ಲೇ ಅವಿತುಕೊಂಡಿತು. ಇದನ್ನರಿಯದ ಹಾವು ಎಂದಿನಂತೆ ಸರಸರನೆ ಬಿಲ ಹೊಕ್ಕು ಮೊಟ್ಟೆಯನ್ನೆಲ್ಲಾ ತಿಂದು ಹೊರಬಂತು. ಮುಂಗುಸಿ ಕೋಪದಿಂದ ಎದುರು ನಿಂತಿತು. ಅಲ್ಲೇ ಇದ್ರೆ ತನ್ನ ಕೊಂದು ಬಿಡುತ್ತದೆ ಎಂದರಿತ ನಾಗರಹಾವು ಪಲಾಯನ ಮಾಡಿತು. ಅಂದಿನಿಂದ ಮುಂಗುಸಿ ಮತ್ತು ನಾಗರಹಾವಿನ ಕದನ ಮುಂದುವರೆದಿದೆ.

**-ಅಮರಯ್ಯಾ ಪತ್ರಿಮಠ, ಸುರಪೂರ**



**ಇದು ನಿಮಗೆ ತಿಳಿದಿರಲಿ** **ಮಿಣುಕುಹುಳು**

ಮಿಣುಕುಹುಳು ಅಥವಾ ಮಿಂಚುಹುಳು ಗಾತ್ರದಲ್ಲಿ ಕೇವಲ ಒಂದು ಇಂಚಿನಷ್ಟಿರುತ್ತವೆ. ಅಧಿಕ ಉಷ್ಣಾಂಶವಿರುವ ಏಷ್ಯಾ ಹಾಗೂ ಉತ್ತರ ಅಮೆರಿಕಾಗಳಲ್ಲಿ ಹೆಚ್ಚಾಗಿವೆ. ಸುಮಾರು 2000ಕ್ಕೂ ಹೆಚ್ಚು ಜಾತಿಗಳಿವೆ.

ಅವುಗಳ ಹೊಟ್ಟೆಯ ಕೆಳಭಾಗದಲ್ಲಿ ಬೆಳಕನ್ನು ಉತ್ಪಾದಿಸುವ ಒಂದು ವಿಶಿಷ್ಟವಾದ ಅಂಗವಿದ್ದು, ಅದರಲ್ಲಿನ ವಿಶೇಷ ಕೋಶಗಳು ಆಮ್ಲಜನಕ ಹಾಗೂ ಶಾಖರಹಿತ ಬೆಳಕನ್ನಾಗಿ ಪರಿವರ್ತಿಸುತ್ತವೆ. ಇವುಗಳ ದೇಹದಿಂದ ಹಳದಿ ಬಣ್ಣದ ಬೆಳಕು ಮಿನುಗುತ್ತಿರುತ್ತದೆ.

**- ಪ.ನಾ.ಹಳ್ಳಿ. ಹರೀಶ್ ಕುಮಾರ್**



# ಊರಿಗೊಂದು ವನ

ಸಾಲಾಗಿ ನಾವು ಸಸಿಗಳನು ನೆಟ್ಟು
ಅನುದಿನವು ನೀರು ಸುರಿಯೋಣ
ಗೊಬ್ಬರವ ಹಾಕಿ ಬೇಲಿಯನು ಕಟ್ಟಿ
ಮುದದಿಂದ ಸಸಿಯ ಬೆಳೆಸೋಣ!

ಅಂಗಳದ ತುಂಬ ಗಿಡಮರದ ಬಳಗ
ಹಚ್ಚಹಸಿರ ಸಿರಿಯ ಕಾಣೋಣ
ಪರಿಶುದ್ಧ ಗಾಳಿ ಪರಿಮಳವು ತೇಲಿ
ನಿತ್ಯವೂ ಆಮೋದ ಪಡೆಯೋಣ!

ತರತರದ ಹೂವು– ಹಣ್ಣುಗಳು ತುಂಬಿ
ರಸಗಂಧ ನಾವು ಸವಿಯೋಣ
ಹಕ್ಕಿಗಳು ಬಂದು ಗೂಡನ್ನು ಕಟ್ಟಿ
ನಲಿಯುವುದು ಕಂಡು ಕುಣಿಯೋಣ!

ಕಡುಬಿಸಿಲು ಇರಲಿ ನೆರಳಲ್ಲಿ ಮಿಂದು
ಸಗ್ಗವನು ಇಳೆಗೆ ಇಳಿಸೋಣ
ಬಗೆಬಗೆಯ ಬುತ್ತಿ ಬನದಲ್ಲಿ ಬಿಚ್ಚಿ
ಮನದುಂಬಿ ಉಂಡು ಹಾಡೋಣ!

ಊರಿಗೊಂದು ವನವು ಐಸಿರಿಯ ನೆಲೆಯು
ತಿಳಿಯುತ್ತ ಅರಿವು ಹರಡೋಣ
ವನದಿಂದ ಕಳೆಯು ವನದಿಂದ ಮಳೆಯು
ಅನುಗಾಲ ಸಾರಿ ಹೇಳೋಣ!

**-ಸಂಗಮೇಶ ಗುಜಗೊಂಡ, ಮೂಡಲಗಿ**